ದಿನಾಂಕಃ 11/09/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂ. ಪಾಟೀ ಸವಾಲುಃ 2 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಸಿ ಎಮ್ ಕೆ ವಕೀಲರಿಂದಃ**

4. ಚನ್ನಪ್ಪ ಮತ್ತು ಸಿದ್ದಲಿಂಗಪ್ಪ ಬೇರೆ ಬೇರೆ ಆಗಿದ್ದ ಬಗ್ಗೆ ನಾನು ದಾವಾ ಹಾಕುವ ಸಮಯದಲ್ಲಿ ವಕೀಲರಿಗೆ ಮಾಹಿತಿ ಕೊಟ್ಟಿಲ್ಲ. ಆದರೆ ಕೂಡಿಯೇ ಇದ್ದರು ಎಂದು ಮಾಹಿತಿ ನೀಡಿರುತ್ತೇನೆ. ಸದರಿ ಚನ್ನಪ್ಪನ ಹಿಸ್ಸೇಗೆ ಭರದ್ವಾಡ ಗ್ರಾಮದ ಸರ್ವೇ ನಂಬರ 36/2 ಬ ಕ್ಷೇತ್ರ 3 ಎಕರೆ 25 ಗುಂಟೆ ಜಮೀನು ಆತನ ಹಿಸ್ಸೇಗೆ ಹೋಗಿತ್ತು ಎಂದರೆ ಸರಿಯಲ್ಲ. ಆದರೆ ಅದನ್ನು ಆತನ ಜೀವನಾಂಶಕ್ಕೆ ಎಂದು ನೀಡಲಾಗಿತ್ತು. ಅದರಂತೆ ಭರದ್ವಾಡ ಗ್ರಾಮದ ಸರ್ವೇ ನಂಬರ 79/2 ಬ ಕ್ಷೇತ್ರ 5 ಎಕರೆ 37 ಗುಂಟೆ ಜಮೀನು ಆತನ ಹಿಸ್ಸೇಗೆ ಹೋಗಿತ್ತು ಎಂದರೆ ಸರಿಯಲ್ಲ. ಆದರೆ ಅದನ್ನು ಆತನ ಜೀವನಾಂಶಕ್ಕೆ ಎಂದು ನೀಡಲಾಗಿತ್ತು. ಇದೇ ರೀತಿ ಹಿರೇಗುಂಜಾಳ ಗ್ರಾಮದ ಹಿಸ್ಸಾ ನಂಬರ 123/1 ಎ ಕ್ಷೇತ್ರ 4 ಎಕರೆ 33 ಗುಂಟೆ ಜಮೀನನ್ನು ಚನ್ನಪ್ಪನ ಹಿಸ್ಸೇಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಆದರೆ ಆ ಜಮೀನನ್ನು ಆತನ ಜೀವನಾಂಶಕ್ಕೆ ನೀಡಲಾಗಿತ್ತು. ಭರದ್ವಾಡ ಗ್ರಾಮದ ಗ್ರಾಮ ಪಂಚಾಯತಿ ನಂಬರ 134 ರಲ್ಲಿ ಮನೆಯ ಆಸ್ತಿಯನ್ನು ಚನ್ನಪ್ಪನ ಹಿಸ್ಸೇಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಆದರೆ ಆತ ಆ ಮನೆಯಲ್ಲಿ ಪ್ರತ್ಯೇಕವಾಗಿ ವಾಸವಿದ್ದ. ಸದರಿ ಚನ್ನಪ್ಪನಿಗೆ ಜೀವನಾಂಶ ನೀಡಿದ್ದ ಬಗ್ಗೆ ದಾಖಲೆಗಳು ಇರುವುದಿಲ್ಲ. ಸದರಿ ಆಸ್ತಿಗಳು ಕಂದಾಯ ದಾಖಲೆಗಳಲ್ಲಿ ಚನ್ನಪ್ಪನ ಹೆಸರು ಇರಲಿಲ್ಲ. ಆದರೆ ಸಿದ್ದಲಿಂಗಪ್ಪನ ಹೆಸರು ಇತ್ತು. ಸಿದ್ದಲಿಂಗಪ್ಪನ ಹೆಸರಿನಲ್ಲಿ ಇದ್ದ ಬಗ್ಗೆ ನಾನು ದಾಖಲೆ ಹಾಜರು ಮಾಡಿಲ್ಲ. ಈ ಮೇಲಿನ ಆಸ್ತಿಗಳನ್ನು ಸದರಿ ಚನ್ನಪ್ಪನಿಗೆ ಜೀವನಾಂಶಕ್ಕಾಗಿ ನೀಡಿರಲಿಲ್ಲ ಆದರೆ ಹಿಸ್ಸಾಕ್ಕೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು ಚನ್ನಪ್ಪನ ಜೀವನಾಂಶಕ್ಕೆ ನೀಡಿದ್ದರು ಅವುಗಳನ್ನು ನಮ್ಮ ತಂದೆಯೇ ಸಾಗುವಳಿ ಮಾಡುತ್ತಿದ್ದರು. ಸದರಿ ಜಮೀನುಗಳನ್ನು ಚನ್ನಪ್ಪನೇ ಹಿಸ್ಸಾ ಪ್ರಕಾರ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿಯಲ್ಲ.

5. ಭರದ್ವಾಡ ಗ್ರಾಮದ ಸರ್ವೇ ನಂಬರ 108/1 ಬ/1 ರಲ್ಲಿ ಕ್ಷೇತ್ರ 4 ಎಕರೆ ಜಮೀನು ಚನ್ನಪ್ಪ ಖರೀದಿ ಹಿಡಿದಿದ್ದು ಇರುತ್ತದೆ ಆದರೆ ಎಲ್ಲರೂ ಕೂಡಿ ಖರೀದಿಸಿದ್ದೇವೆ. ಸದರಿ ಜಮೀನು ಖರೀದಿ ಮಾಡುವ ಮೊದಲು ಚಿಕ್ಕಮಠ ಅವರ ಆಸ್ತಿಯಾಗಿತ್ತು. ಖರೀದಿ ವ್ಯವಹಾರ ಆಗುವ ಸಮಯದಲ್ಲಿ ಮತ್ತು ಖರೀದಿ ಪತ್ರ ನೋಂದಣಿ ಮಾಡುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಸದರಿ ಖರೀದಿ ಪತ್ರ ನೋಂದಣಿ ಆದ ದಿನಾಂಕ, ತಿಂಗಳು ಮತ್ತು ಇಸ್ವೀ ನನಗೆ ಗೊತ್ತಿಲ್ಲ. ಸದರಿ ಖರೀದಿ ವ್ಯವಹಾರ ಹಣವನ್ನು ಯಾರು ಯಾರಿಗೆ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಚನ್ನಪ್ಪ ತನ್ನ ಹಿಸ್ಸೇಗೆ ಬಂದ ಜಮೀನುಗಳ ಆದಾಯದಿಂದ ಸರ್ವೇ ನಂಬರ 108/1 ಬ/1 ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಚನ್ನಪ್ಪನ ಹೆಂಡತಿಯ ಹೆಸರು ನೀಲವ್ವ. ಸದರಿ ನೀಲವ್ವಳು ಚನ್ನಪ್ಪನ ಜೀವಿತಾವಧಿಯಲ್ಲಿ

ತೀರಿಕೊಂಡಿರುತ್ತಾಳೆ. ಈ ದಂಪತಿಗಳಿಗೆ ಮಕ್ಕಳು ಇರಲಿಲ್ಲ. ಚನ್ನಪ್ಪನ ಹೆಂಡತಿ ಮರಣಾನಂತರ ಆತನನ್ನು ನಮ್ಮ ತಂದೆ ಸಿದ್ದಲಿಂಗಪ್ಪ ಮತ್ತು 2 ನೇ ಪ್ರತಿವಾದಿ ಸಂಗಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಚನ್ನಪ್ಪನೂ ಕೂಡ ಸಿದ್ದಲಿಂಗಪ್ಪ ಮತ್ತು 2 ನೇ ಪ್ರತಿವಾದಿ ಸಂಗಪ್ಪನ ಮೇಲೆ ವಾತ್ಸಲ್ಯ ಹೊಂದಿದ್ದ ಎಂದರೆ ಸರಿ. ಈ ಕಾರಣದಿಂದ ಚನ್ನಪ್ಪ ತನ್ನ ಜೀವಿತ ಕಾಲದಲ್ಲಿ ಅವರ ಪರ ಮೃತ್ಯು ಪತ್ರ ಬರೆದಿಟ್ಟಿರುತ್ತಾನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕೆಲವು ದಾಖಲೆಗಳನ್ನು ಪರಿಶೀಲಿಸಲು ಕಾಲಾವಕಾಶ ಕೋರಿರುತ್ತಾರೆ. ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ 11-09-2023 ರಂದು ಮಧ್ಯಾಹ್ನ 01ಃ21 ರಿಂದ 01ಃ44 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ